ಅದವರಲ್ಲಿ ಕಾಮಾಸಕ್ತಿಯನ್ನು ನಿರಂತರ ಜಾಗ್ರತಗೊಳಿಸುತ್ತಿರುತ್ತದೆ; ಸೇನಾಧಿಪತಿಯಂತೆ ಆಕ್ರಮಣಶೀಲರನ್ನಾಗಿಸುತ್ತದೆ. ಅಂದರೆ ಇಲ್ಲಿ ಇತರರಿಗಿಂತ ಹೆಚ್ಚು ಪುರುಷ ಸಾಂಗತ್ಯಕ್ಕೆ ಜಾತಕಳನ್ನು ತುಡಿಯುವಂತೆ ಪ್ರಚೋದಿಸುತ್ತಿರುತ್ತದೆ. ಇದೀಗ ಈಕೆಗೆ 27 ವರ್ಷ ತುಂಬಿವೆ. ಇವಳ ಮೈಮನಗಳು ಈಕೆಯ ಅಂಕೆ ಮೀರಿ ವರ್ತಿಸುತ್ತಿರುವುದರ ಸುಳಿವು ಈಗಾಗಲೇ ನಿಮಗೆ ಸಿಕ್ಕಿರಲೂ ಸಾಕು' ಎಂಬ ಕಡು ಸತ್ಯವನ್ನು ಕಣ್ಣಾರೆ ಕಂಡವರಂತೆ ಹೇಳಿಬಿಟ್ಟರು.

ಇದ್ದಕ್ಕಿದ್ದಂತೆ ಜ್ಯೋತಿಷಿಯು ಮೂಡಿಸಿದ ನಂಬಿಕೆಯ ಮಾತಿಗೆ ತಲೆಯಾಡಿಸುತ್ತ 'ಮಗಳಿಗೆ ಮದುವೆ ಮಾಡಬೇಕೆಂಬ ಆಸೆ ಕೈಗೂಡುತ್ತಿಲ್ಲ. ಸೋತು ಸುಣ್ಣವಾಗಿದ್ದೇವೆ. ಹುಡುಗಿ ಲಕ್ಷಣವಾಗಿದ್ದಾಳೆಂದು ಹೇಳುತ್ತಲೇ ಜಾತಕ ಲಗತ್ತಿಲ್ಲವೆಂದು ಕೈ ಕೊಡವಿಕೊಳ್ಳುತ್ತಿದ್ದಾರೆ. ನಮಗೆ ನೀವೇ ದಾರಿ ತೋರಿಸಬೇಕು' ಎಂದು ಹೇಳಿ ಕೈಮುಗಿದು ಕುಳಿತರು.

'ಒಂದು ಕೆಲಸ ಮಾಡೋಣ. ಸಾವಿರ ಸುಳ್ಳು ಹೇಳಿ ಒಂದು ಮದುವೆ ಎಂಬ ಆಡು ಮಾತೇ ಇದೆ. ಈ ಜಾತಕವನ್ನು ಯಾರಿಗೆ ತೋರಿಸಿದರೂ ಜಾತಕದ ಲಕ್ಷಣಗಳು ಹುಡುಗಿಯ ನಡತೆಯಲ್ಲಿ ಕಾಣಲೇಬೇಕು. ನಿಮಗೆ ಒಪ್ಪಿಗೆಯಾದರೆ ಜಾತಕ ಬದಲಾಯಿಸಿ ಬಿಡೋಣ' ಎಂದರು.

ಅಪ್ಪನಿಗೆ ಯೋಚಿಸುವಷ್ಟು ತಾಳ್ಮೆ ಇರಲಿಲ್ಲ. ನಂಬಿಸುವ ಕ್ರಮಕ್ಕೆ ವಶೀಕರಣಕ್ಕೆ ಒಳಗಾದವರಂತೆ ಒಪ್ಪಿಬಿಟ್ಟಿದ್ದರು.

'ಹನ್ನೊಂದನೇ ಮನೆಯ ಕುಜಗ್ರಹವನ್ನು ಬೇರೆ ಮನೆಗೆ ವರ್ಗಾಯಿಸಿ ಹೊಸದಾಗಿ ಸೃಷ್ಟಿ ಮಾಡಿಕೊಡುತ್ತೇನೆ. ಆಗ ನೋಡಿ ತಡವಿಲ್ಲದೆ ಲಗ್ನ ಮುಹೂರ್ತ ಇಡಲು ನನ್ನಲ್ಲಿಗೇ ಬರುತ್ತೀರಿ. ಇದು ಕೇವಲ ಮದುವೆಯಾಗಲಿ ಅನ್ನುವ ಒಂದೇ ದೃಷ್ಟಿಯಿಂದ ಮಾಡುತ್ತಿರುವ ಜಾತಕದ ಬದಲಾವಣೆ. ಆಷಾಢದ ಹೆಣ್ಣಾಯಿಗಳಂತೆ ದೇಹದಾಹಿಗಳನ್ನು ಮರಳುಗೊಳಿಸುವುದು ಈ ಜಾತಕದ ಹುಟ್ಟುಗುಣವಿದ್ದು ಅದ್ಯಾವತ್ತೂ ಬದಲಿ ಆಗುವುದಿಲ್ಲವೆಂಬುದು ನಿಮ್ಮ ಮನದಲ್ಲಿರಲಿ'.

ಹಾಗೆ ಬದಲಾಯಿಸಿಕೊಂಡು ಬಂದ ಜಾತಕದ ಫಲವೇ ನಮ್ಮೀ ಮದುವೆ. ಮಗಳ ಘನಕಾರ್ಯ ಗಂಡಿನವರಿಗೆ ತಿಳಿಯದಿರಲಿ ಎಂದು ಹುಟ್ಟಿದ ಊರಿನಲ್ಲಿದ್ದ ಏಕೈಕ ಆಸ್ತಿಯನ್ನು ಮಾರಿ ಕಾಣದ ಊರಿಗೆ ಬಂದು ಬಾಡಿಗೆ ಬಿಡಾರ ಹೂಡಿದೆವು.

ಮಾರಾಟದ ಹಣದಿಂದ ನೆರವೇರಿದ ಮದುವೆ ಕಾರ್ಯದ ಸಹಜ ದಣಿವಿನಿಂದಾಗಿ ಮೊದಲ ರಾತ್ರಿಯ ಅನುಭವವು ಇಬ್ಬರಿಗೂ ಲೆಕ್ಕಕ್ಕೆ ಸಿಕ್ಕಿರಲಿಲ್ಲ.

ನಿರಂತರ ಅನ್ಯೋನ್ಯತೆಯಲ್ಲಿ ಪತಿಯು ಪ್ರೀತಿ – ವಿಶ್ವಾಸ, ಗೌರವವನ್ನಿಟ್ಟು ನನ್ನನ್ನು ಮನಸಾರೆ ಪ್ರೀತಿಸುತ್ತಿದ್ದರು. ಅದಕ್ಕೆ ತಕ್ಕುದಾದ ಪ್ರತಿಸ್ಪಂದನ ನನ್ನದ್ದೂ ಆಗಿ ರಾತ್ರಿಯ ಆಯಾಮಗಳ ಚೇತೋಹಾರಿ ಆಸಕ್ತಿಯಿಂದ ತೊಡಗಿಕೊಳ್ಳುತ್ತಿದ್ದೆವು.

ಇವರು ಭಾವಜೀವಿಯಾಗಿರುವುದರಿಂದ ಪೂರ್ಣ ಸಂತೃಪ್ತಿ ಇದೆ ಅಂದುಕೊಂಡಿದ್ದೆ. ಆದರೆ ನಾನೆಷ್ಟು ಉದ್ರೇಕಗೊಂಡರೂ ಜೈನರ ಹುಡುಗನೊಬ್ಬನ ಪರಮ ಸುಖದ ಉತ್ತುಂಗವನ್ನು ನನ್ನವರಿಂದ ಕಾಣಲಾಗಲೇ ಇಲ್ಲ.

ಮನೆಬಾಗಿಲಿಗೆ ದಿನಪತ್ರಿಕೆ, ವಾರಪತ್ರಿಕೆ ಬಂದು ಬೀಳುತ್ತಿದ್ದವು. ಟಿ.ವಿ., ಪತ್ರಿಕೆಗಳೇ ನನ್ನ ಹಗಲ ಒಡನಾಡಿಗಳಾಗಿದ್ದವು. ಈ ಒಡನಾಟದಿಂದಾಗಿ ಬೇರೆಯೇ ಆದ ಮನಸ್ಸೊಂದು ನನ್ನ ಅರಿವಿಗೂ ಮೀರಿ ಆಕಾರ ಪಡೆದುಕೊಂಡಿತ್ತು.

ಈ ಎರಡು ವರ್ಷಗಳಲ್ಲಿ ನನ್ನ ಮಡಿಲು ತುಂಬ ಬೇಕಾಗಿದ್ದು ತುಂಬಿಕೊಳ್ಳದೆ ಆ ಸಹಜ ಬಯಕೆಗಾಗಿ ಪರಿತಪಿಸುವುದಾಗಿತ್ತು.

ಆತಂಕದ ಛಾಯೆಯ ನಡುವೆಯೇ ನನ್ನನ್ನು ತವರು ಮನೆಯವರು ಕರೆದೊಯ್ದರು. ಬಹುಶಃ ಹೆರಿಗೆಗೂ ಮುನ್ನ ಉಪಚರಿಸಿಕೊಂಡ ಮದ್ದಿನ ಪ್ರಭಾವವು ಇದ್ದಿರಬಹುದೆಂದೂ ದಿನಗಳೆದಂತೆ ಸರಿಹೋಗಬಹುದೆಂಬ ಸಮಾಧಾನವನ್ನು ಅಮ್ಮ ನೀಡಿದರು.

ಆಗದು ಆಷಾಢ ಶ್ರಾವಣವಾಗಿತ್ತು. ಜಿರಾಪಟ್ಟೆ ಬೀಳುವ ಮುಂಗಾರಿನ ನಡುವೆ ತವರು ಮನೆಯಲ್ಲಿನ ಸಾಲು ಸಾಲು ಹಬ್ಬಗಳ ಆಚರಣೆಯಲ್ಲಿ ದಿವಾಕರ ಭಟ್ಟ ಅನ್ನುವ ಸಬೂಳನೆಯ ವ್ಯಕ್ತಿಯ ಪರಿಚಯವಾಯಿತು. ಮೊದಮೊದಲು ಆ ಪುಳ್ಚಾರಿಯನ್ನು ನಿರ್ಲಕ್ಷಿಸಿದ್ದೆ. ಆದರೆ ಸಮಯಾವಕಾಶದಲ್ಲಿ ಗಂಡ ನೀಡಿದ ಪ್ರೀತಿಗಿಂತಲೂ ಗಪ್ಪೆನ್ನುವ ನಟ್ಟಿರಲಿಲ್ಲ. ಹುಟ್ಟಿದ ಕಾಮದ ಬಯಕೆ ಮತ್ತದನ್ನು ನೀಗಿಸಿಕೊಳ್ಳುವ ಕ್ರಮದ ಅವಲಂಬನೆಯ ಕೈ ಮೇಲಾಗಿತ್ತು.

ಒಂದು ತಿಂಗಳ ನಂತರ ಕರೆದೊಯ್ಯಲು ಗಂಡ ಬಂದರು. ಹೊಸ ಸ್ನೇಹದ ಭರದಲ್ಲಿ ಇವರೊಂದಿಗೆ ಸೇರಬಯಸದೇ ನಿಂತ ಮೂರು ದಿನಗಳಲ್ಲಿ 'ಬಹಿಷ್ಠೆ' ಪದದ ಸಹಕಾರ



ಚಿತ್ರ: ಎಸ್.ವಿ. ಹೂಗಾರ್